ವೃದ್ಧಾಪ್ಯ ವೇತನ, ಅಂಗವಿಕಲ ವೇತನ ಹಾಗೂ ವಿಧವಾ ವೇತನಗಳ ಬಗ್ಗೆ

೧೩೮೭. ಶ್ರೀ ಜಿ. ರಾಮದಾಸ್ (ಹೊಸದುರ್ಗ).–ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ನೀಡಂತ್ತಿರುವ ವೃದ್ಧಾಪ್ಯ ವೇತನ, ಅಂಗವಿಕಲ ವೇತನ ಮತ್ತು ವಿಧವಾ ವೇತನಕ್ಕಾಗಿ ಪ್ರತಿ ತಿಂಗಳು ಸರ್ಕಾರಕ್ಕೆ ಎಷ್ಟು ಹಣ ಖರ್ಚಾಗುತ್ತಿದೆ. ಹಾಗೂ ಇದುವರೆಗೆ ಎಷ್ಟು ಜನರಿಗೆ ಈ ಸೌಲಭ್ಯ ದೊರಕಿದೆ ?

ಆ) ಹೊಸದುರ್ಗ ತಾಲ್ಲೂಕಿನಲ್ಲಿ ಈ ಸೌಲಭ್ಯ ಪಡೆಯುತ್ತಿರುವವರ ಸಂಖ್ಯೆ ಎಷ್ಟು? ಇದಕ್ಕಾಗಿ ಕಳೆದ ೨ ವರ್ಷಗಳಲ್ಲಿ ಸರ್ಕಾರವು ವೆಚ್ಚ ಮಾಡಿರುವ ಹಣವೆಷ್ಟು? ಈ ರೀತಿ ಸೌಲಭ್ಯ ಹೊಂದುತ್ತಿರುವವರಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಮಂದಿ ಹಿಂದುಳಿದ ಜನಾಂಗದವರಿದ್ದಾರೆ ?

ಇ) ೧೯೮೬–೮೭ನೇ ಸಾಲಿನಲ್ಲಿ ಈ ರೀತಿ ಮಾಸಾಶನದ ವೇತನ ಪಡೆಯುತ್ತಿದ್ದವರ ಪೈಕಿ ಯಾರಿಗಾದರೂ ರದ್ದುಪಡಿಸಲಾಗಿದೆಯೇ ?

ಈ) ಹಾಗಿದ್ದರೆ ಎಷ್ಟು ಜನರಿಗೆ ರದ್ದಾಗಿದೆ ? ಹಾಗೂ ಕಾರಣವೇನು ? ಈ ರೀತಿಯಲ್ಲಿ ಈ ವರ್ಷ ಎಷ್ಟು ಜನರಿಗೆ ವೇತನ ಮಂಜೂರಾಗಿದೆ. ಹಾಗೂ ವೇತನ ಮಂಜೂರಾತಿಯಲ್ಲಿ ಜನರಿಗೆ ಕಂದಾಯ ಇಲಾಖೆ ನೌಕರರಿಂದ ಕಿರುಕುಳವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು),—

ಅ)

	ರಾಜ್ಯದಲ್ಲಿ ವೃದ್ಧಾಪ್ಯ ವೇತನ ಅಂಗವಿಕಲ ವೇತನ, ವಿಧವಾ ವೇತನಕ್ಕೆ ಪ್ರತಿ ತಿಂಗಳು ಖರ್ಚಾಗುತ್ತಿರುವ ಹಣ	ಸೌಲಭ್ಯ ಪಡೆಯುತ್ತಿರುವವರ ಸಂಖ್ಯೆ
೧ ವೃದ್ಧಾಪ್ಯ ವೇತನ	೩,೩೭,೧೯,೮೪೦–೦೦	೬,೫೪,೫೬೦
೨ ಅಂಗವಿಕಲ ವೇತನ	೧,೪೧,೭೦,೬೩೭–೦೦	೨,೭೫,೧೫೮
೩ ವಿಧವಾ ವೇತನ	೨,೪೦,೫೪,೯೭೭–೦೦	೪,೬೭,೦೮೫

ಆ)

	ಹೊಸದುರ್ಗ ತಾಲ್ಲೂಕಿನಲ್ಲಿ ಈ ಸೌಲಭ್ಯ ಪಡೆಯುತ್ತಿರುವವರ ಸಂಖ್ಯೆ	ಕಳೆದ ೨ ವರ್ಷಗಳಲ್ಲಿ ವೆಚ್ಚ ಮಾಡಿರುವ ಹಣ.
೧ ವೃದ್ಧಾಪ್ಯ ವೇತನಗಳು	೩,೨೮೧	ರೂ. ೫೯,೩೭,೨೦೦–೦೦
೨ ಅಂಗವಿಕಲ ವೇತನಗಳು	೧,೨೨೫	ರೂ. ೧೪,೭೦,೦೦೦–೦೦
೩ ವಿಧವಾ ವೇತನಗಳು	೧,೬೫೭	ರೂ. ೧೮,೭೪,೨೪೦–೦೦

ಹೊಸದುರ್ಗ ತಾಲ್ಲೂಕಿನಲ್ಲಿ ಹಿಂದುಳಿದ ಜನಾಂಗದವರ ವಿವರ

	ವೃದ್ಧಾಪ್ಯ ವೇತನ	ವಿಧವಾ ವೇತನ	ಅಂಗವಿಕಲ ವೇತನ
ಪರಿಶಿಷ್ಟ ಪಂಗಡ	೧೪೦	೭೬	೫೭
ಪರಿಶಿಷ್ಟ ಜಾತಿ	೭೭	೫೬೨	೩೮೪
ಇತರೆ	೩,೦೬೪	೧,೦೧೯	೭೮೪
ಒಟ್ಟು	೩,೨೮೧	೧,೬೫೭	೧,೨೨೫

ಇ) ರದ್ದುಪಡಿಸಲಾಗಿದೆ

ಈ) ವಾರ್ಷಿಕ ತಪಾಸಣೆ ಕಾಲದಲ್ಲಿ ಕೆಲವು ಅನರ್ಹರಿಗೆ ವೇತನ ಮಂಜೂರಾದ ಪ್ರಕರಣಗಳು ಕಂಡುಬಂದು ೪ ವೃದ್ದಾಪ್ಯ ವೇತನಿಗಳಿಗೆ ಮತ್ತು ೬ ಅಂಗವಿಕಲ ವೇತನಗಳಿಗೆ ವೇತನಿವನ್ನು ರದ್ದುಪಡಿಸಲಾಗಿದೆ.

ಈ ವರ್ಷ ಮಂಜೂರಾದ ವೇತನಿಗಳ ಸಂಖ್ಯೆ

೧	ವೃದ್ದಾಪ್ಯ ವೇತನ	೧೨೨
೨	ವಿಧವಾ ವೇತನ	೭೩
೩	ಅಂಗವಿಕಲ ವೇತನ	೨೫೩

ವೇತನ ಮಂಜೂರಾತಿಯಲ್ಲಿ ಜನರಿಗೆ ಕಂದಾಯ ಇಲಾಖೆಯ ನೌಕರರಿಂದ ಕಿರುಕುಳವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲಾ.

ಜಿಲ್ಲಾ ಪುನರ್ ವಿಂಗಡಣಾ ಸಮಿತಿಯ ವರದಿಯ ಬಗ್ಗೆ

೧೪೦೬.(೧) ಶ್ರೀ ಎಸ್.ಜಿ.ಸಂಜಯ್ಯ ನವಂತ(ಗುಳೇದ ಗುಡ್ಡ).–ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಪುನರ್ ವಿಂಗಡಣ ಸಮಿತಿಯು ವರದಿಯು ಸಿದ್ದವಾಗಿದೆಯೇ ?

ಆ) ವರದಿಯಲ್ಲಿ ಬಾಗಲಕೋಟೆಯನ್ನು ಜಿಲ್ಲೆಯನ್ನಾಗಿ ಪರಿವರ್ತಿಸಬೇಕೆಂದು ಶಿಫಾರಸ್ಸು ಮಾಡಲಾಗಿದೆಯೇ ಹಾಗೂ ಗುಳೇದಗುಡ್ಡ ತಾಲ್ಲೂಕು ಕೇಂದ್ರ ಸ್ಥಳ ಮಾಡಬೇಕೆಂಬ ಶಿಫಾರಸ್ಸು ಮಾಡಲಾಗಿದೆಯೇ ?

ಇ) ವರದಿಯನ್ನು ಸರ್ಕಾರ ಎಂದು ಜಾರಿಗೊಳಿಸುವುದು ವರದಿಯನ್ನು ಜಾರಿಗೊಳಿಸಲು ಯಾವುದೇ ನಿರ್ದಿಷ್ಟ ಸಮಯವನ್ನು ಗೊತ್ತುಪಡಿಸಲಾಗಿದೆಯೇ ?

ಈ) ಹೊಸ ಜಿಲ್ಲೆಯ ಮಂತ್ರಿ ಹೊಸ ತಾಲ್ಲೂಕನ್ನು ಸ್ಥಾಪಿಸಿದಲ್ಲಿ, ತಲಾ ಎಷ್ಟು ಖರ್ಚು ಬರುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).–

ಅ) ಇಲ್ಲ. ಜಿಲ್ಲಾ ಪುನರ್ವಿಂಗಡಣಾ ಸಮಿತಿಯ ಅಂತಿಮ ವರದಿಯು ಸ್ವೀಕೃತವಾಗಬೇಕಾಗಿದೆ.

ಆ), ಇ), ಈ) ಉಪ ಪ್ರಶ್ನೆ (ಅ) ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಗಿರಿಜನರ ಅಭಿವೃದ್ಧಿಗಾಗಿ ವಿವಿಧ ಇಲಾಖೆಗಳಲ್ಲಿ ತೊಡಗಿಸಿದ ಹಣದ ಬಗ್ಗೆ

೧೩೦೧ (೧) ಶ್ರೀ ಶಿವಣ್ಣ.(ಹೆಚ್.ಡಿ.ಕೋಟೆ)ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫–೮೬, ೧೯೮೬–೮೭ ಮತ್ತು ೧೯೮೭–೮೮ರಲ್ಲಿ ಗಿರಿಜನರ ಅಭಿವೃದ್ಧಿಗಾಗಿ ವಿವಿಧ ಇಲಾಖೆಯಲ್ಲಿ ವಿವಿದ ಕಾರ್ಯಕ್ರಮಗಳಿಗಾಗಿ ತೊಡಗಿಸಿದ್ದ ಹಣ ಎಷ್ಟು ?

ಆ) ೧೯೮೫–೮೬ ರಿಂದ ಪ್ರತಿ ವರ್ಷದಲ್ಲಿಯೂ ಉಳಿದಿರುವ ಹಣ ಎಷ್ಟು ? ಹಾಗೂ ಹಣ ಉಳಿಯಲು ಕಾರಣವೇನು ?